Regd No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂವತ್ಸರ 31 ಸಂಚಿಕೆ 76] ಮುಂಗವಾರ 13—1—48 [ಬಿಡಿ ಪ್ರತಿ 3 ಪೈ

ಪಾಕಿಸ್ತಾನದ ಹಣ!

ಧರ್ಮ ಯುದ್ಧ

ಸಮಾಚಾರ

ಪ್ರ|| ರಾಜಾ ಎಸ್. ಗುರುರಾಜಾಚಾರ್ಯ
ಕಾರ್ಯದರ್ಶಿ, ಅಖಿಲ ಕರ್ನಾಟಕ
ಸನಾತನಿಗಳ ಸಂಘ, ಮಂತ್ರಾಲಯ.

—

ಕಾನೂನು ಮುರಿಯಲು ಬಂದಿರುವೆ

— ಶ್ರೀ ಸ್ವಾಮಿ ಕರಪಾತ್ರಜೀ

ಬೊಂಬಾಯಿ ಡಿ 12— ಶ್ರೀ ಸ್ವಾಮಿ ಕರಪಾತ್ರಜಿ ಮಹಾರಾಜರು ಪಂಡರಪುರದಿಂದ ಬೊಂಬಾಯಿಗೆ ಆಗಮಿಸಿದ್ದಾರೆ. ಶ್ರೀ ಸ್ವಾಮಿಜೀಯನ್ನು ಕಂಡೊಡನೆ ಒಬ್ಬ ಪೋಲೀಸು ಸಬ್ ಇನ್‌ಸ್ಪೆಕ್ಟರು 'ಸ್ವಾಮಿಜೀ ಮಹಾರಾಜ್! ತಾವು ಡೆಲ್ಲಿ ಮಥುರಾದಲ್ಲಿ ಸತ್ಯಾಗ್ರಹ ಮಾಡಿ ನಮ್ಮ ಸರಕಾರಕ್ಕೆ ಕಿರುಕುಳ ಕೊಡುತ್ತಿರುವುದು ಸಾಲದೇ ಪಂಡರಪುರದಲ್ಲಿ ಬೇರೆ ಗಲಾಟೆ ಎಬ್ಬಿಸಿದ್ದೀರಿ. ಈಗ ತಾವು ಇಲ್ಲಿಗೆ ಏಕೆ ಬಂದಿರೋಣವಾಗಿದೆ? ಎಂದು ಕೇಳಿದನು. ಸ್ವಾಮಿಜೀಯವರು ಹಸನ್ಮುಖದಿಂದ 'ನಿಮ್ಮ ಬೊಂಬಾಯಿ ಸರಕಾರವು ಮಾಡಿರುವ ಮಂದಿರ ಪ್ರವೇಶ ಮಸೂದೆಯನ್ನು ಮುರಿಯಲು ಬಂದಿರುವೆ' ಎಂದು ಹೇಳಿದರು. ಆಗ ಆ ಪೋಲೀಸು ಇನ್‌ಸ್ಪೆಕ್ಟರನು— ಹಾಗಾದರೆ ತಮ್ಮನ್ನು ದಸ್ತಗಿರಿ ಮಾಡುವೆ ಎಂದನು. ಶ್ರೀ ಸ್ವಾಮಿಜೀಯವರು ನಗುತ್ತ 'ವಾರಂಟು ಎಲ್ಲಿದೆ ತೋರಿಸು! ಇವಲಿ ಅದಿಲ್ಲದಿದ್ದರೂ ಸರವಿಲ್ಲ ನಾನು ಸಿದ್ಧನಿರುವೆ ಬಂಧಿಸು' ಎಂದರು. ಆದರೆ ಆ ಇನಸ್ಪೆಕ್ಟರನು ಏನೊಂದೂ ಉತ್ತರ ಕೊಡದೆ ಹೊಂಟು ಹೋದನು!

ಂ ಂ

ಶ್ರೀ ವಲ್ಲಭಮಠಾಧೀಶರ ಸತ್ಯಾಗ್ರಹವೆ?

ಬೊಂಬಾಯಿ ಡಿ 6—ಶ್ರೀ ವಲ್ಲಭ ಮಠಾಧೀಶರಾದ ಶ್ರೀ ಗೋಸ್ವಾಮಿ ಕೃಷ್ಣಜೀವನಜೀ ಮಹಾರಾಜರು ಧರ್ಮಕರ ಹಕ್ಕುಬಾಧ್ಯತೆಗೆ ಕುಂದು ತರುವ ಮಂದಿರ ಪ್ರವೇಶ ಕಾನೂನನ್ನು ಎದುರಿಸಲು ಪಂಡರಪುರಕ್ಕೆ ಒಂದಿದ್ದಾರೆ. ಶ್ರೀಗಳವರು ಇದಕ್ಕಾಗಿ ಉಪವಾಸ ಸತ್ಯಾಗ್ರಹ ಮಾಡುತ್ತಾರೆಂದು ತಿಳಿಯಬಂದಿದೆ.

ಂ ಂ

ಧರ್ಮ ಯುದ್ಧ

ದೆಹಲಿ ಡಿ 6—ಸ್ಥಾನೀಯ ಧರ್ಮ ಸಂಘದ ಸಮಾಚಾರದಿಂದ ಈವರೆಗೆ ಸೂಚಿತವಾಗಿದ್ದ ದೆಹಲಿ ಧರ್ಮಯುದ್ಧವು ಮುಂದೆ ಕ್ರಮವಾಗಿ ನಡೆಯುವುದೆಂದು ತಿಳಿಯಬರುತ್ತದೆ.

ರ ಂ

ಪ್ರಚಾರಕಾರ್ಯ

ಬೊಂಬಾಯಿ ಡಿ 12— ತಾ|| 23, 24, 25 ರಲ್ಲಿ ಪಂಡರಪುರದಲ್ಲಿ ಯುವ ಅ|| ಭಾ|| ಸನಾತನೀ ಸರ್ವದಲದ ಸಮ್ಮೇಳನ ಪ್ರಚಾರಾರ್ಥವಾಗಿ ಶ್ರೀ ಪಂ| ಗೋಪಾಲಶಾಸ್ತ್ರಿ, ವ್ರಜಭೂಷಣ ಪಾಂಡೇಯರು ಅನೇಕ ಕಡೆ ಸಂಚಾರ ಮಾಡಿ ಪ್ರಚಾರ ಮಾಡುತ್ತಿದ್ದಾರೆ ಶ್ರೀ ಪಂ|| ದೇವನಾಥ ಚಾರ್ಯುಜೀಯವರು ಸದರೀ ಸಮ್ಮೇಳನದ ಪ್ರಚಾರಕಾರ್ಯಾರ್ಥವಾಗಿ ಮಿಂಚಿನ ಪ್ರವಾಸಕ್ಕೆಗೊಂಡು ಇಲ್ಲಿಗೆ ಬಂದಿದ್ದಾರೆ. ಇವರು ಇಲ್ಲಿ ಒಂದೇದಿನ ೩ ಭಾಗದಲ್ಲಿ ಬೇರೆ ಬೇರೆಯಾಗಿ ಪ್ರಚಾರೋಪನ್ಯಾಸ ನಡೆಸಿದರು.

ಂ ಂ

ಆಗ್ರಾದಲ್ಲಿ ಗೋವಧೆ ನಿಂತಿತು

ಆಗ್ರಾ ಡಿ 27— ಇಲ್ಲಿಯ ಸ್ಥಾನೀಯ ಜೋರ್ಡಿನವರು ಧರ್ಮಸಂಘದವರ ಬೇಡಿಕೆಗೆ ಕಿವಿಗೊಟ್ಟು ತಮ್ಮ ಎಲ್ಲೆಯಲ್ಲಿ ಗೋವಧೆಯನ್ನು ನಿಲ್ಲಿಸಿದ್ದಾರೆ, ಮತ್ತು ಇನ್ನು ಮುಂದೆ ತಮ್ಮ ಎಲ್ಲೆಯಲ್ಲಿ ಗೋ ಮಾಂಸವು ಬರಕೂಡದು, ಮಾರಾಟ ಮಾಡಕೂಡದು ಎಂದೂ ಅಜ್ಞೆ ಹೊರಡಿಸಿದ್ದಾರೆ. ಕೆಲ ಮುಸ್ಲಿಂ ಸದಸ್ಯರೂ ಇದಕ್ಕೆ ಬೆಂಬಲ ಕೊಟ್ಟರುವುದು ಸಂತೋಷ ವಿಚಾರವಾಗಿದೆ.

.....

ಭಾಷಾ ಪ್ರಯುಕ್ತ ಪ್ರಾಂತ್ಯ ವಿಭಜನೆ

ಕರ್ನಾಟಕರೂ, ತಮಿಳರೂ, ಆಂಧ್ರರೂ ಶತೃಗಳಧಾಳಿಗೆ ನಿಲ್ಲಲಾರದೆ ದಿಶೆ ದಿಶೆಗಳಿಗೆ ಓಡಿಹೋಗುತ್ತಿದ್ದ ಸಮಯದಲ್ಲಿ ನಮ್ಮ ವಿದ್ಯಾರಣ್ಯರು ಅವರನ್ನೆಲ್ಲರನ್ನೂ ಒಂದೇ ಧ್ವಜದ ಕೆಳಗೆ ತಂದು ಶತ್ರುಗಳ ಬಾಧೆಯಿಂದ ಸಲುಹಿದರೆಂಬ ವಿಷಯವನ್ನು ನಾವು ಮರೆಯಕೂಡದು. ದಕ್ಷಿಣ ದೇಶಕ್ಕೆ ಒಂದು ಜಾತೀಯ ದೃಷ್ಟಿಯನ್ನು ಕೊಟ್ಟವರು ಶ್ರೀ ವಿದ್ಯಾರಣ್ಯರು. ಕೃಷ್ಣದೇವರಾಯರು ಆಂಧ್ರ, ಕರ್ನಾಟಕ, ತಮಿಳು ಭಾಷೆಗಳಿಗೆ ಉದಾರಾಶ್ರಯವನ್ನಿತ್ತಿದ್ದವರು. ಈ ಮಹಾನುಭಾವನ ಕಾಲವು ಈ ಮೂರು ಭಾಷೆಗಳಿಗೂ ಸ್ವರ್ಣಯುಗ ವೆಂದೆನ್ನಬಹುದು. ಪ್ರತ್ಯೇಕ ಕರ್ನಾಟಕ, ಪ್ರತ್ಯೇಕ ಆಂಧ್ರಗಳೆಂಬ ಸಂಕುಚಿತ ಆಶಯಗಳಿಗಿಂತ ಸಂಯುಕ್ತ ದಕ್ಷಿಣ ದೇಶವೆಂಬ ಭಾವವು ಶ್ರೀ ವಿದ್ಯಾರಣ್ಯರಿಂದ ನಮಗೆ ಪಿತ್ರಾರ್ಜಿತವಾಗಿ ಕೊಡಲ್ಪಟ್ಟಿದೆ. ಆದುದರಿಂದ ಭಾಷಾ ಪ್ರಯುಕ್ತವಾಗಿ ರಾಷ್ಟ್ರಗಳ ವಿಭಜನೆ ತಕ್ಕುದಲ್ಲ. ಕನ್ನಡ; ತಮಿಳು, ತೆಲಗು ಭಾಷೆಗಳಿಗೆ ಕೇಂದ್ರವಾದ ಮಧ್ಯ ದೇಶದಲ್ಲಿ ಯಾವ ಭಾಷೆಗೂ ವೈಮುಖ್ಯತೆಯು ಇರಕೂಡದು. (ತಿ)

—

ಬಟ್ಟೆ ನಿಯಂತ್ರಣ ಹೋಗುತ್ತೆ

ನವದೆಹಲಿ ಜ 10— ಈ ತಿಂಗಳು 18 ರಿಂದ ಬಟ್ಟೇ ಮೇಲಿನ ಹತೋಟೆ ತೆಗದುಹಾಕಲಾಗುವುದೆಂದು ನಿಶ್ಚಯವಾಗಿದೆಯೆಂದು ಹೇಳಲಾಗಿದೆ.

ಸುದ್ದಿಗಳು

—

ನವದೆಹಲಿ ಜ 12—ರಿಜರ್ವ್ ಬ್ಯಾಂಕಿನಲ್ಲಿ ಪಾಕಿಸ್ತಾನದ ಶಿಲ್ಕು ಏನೂ ಇಲ್ಲವೆಂದೂ 55 ಕೋಟಿಯು ಪಾವತಿ ಕಾಶ್ಮೀರದ ಸಮಸ್ಯೆಯು ವ್ಯವಸ್ಥೆಯನ್ನೇರಿರುವುದೆಂದೂ ಸ|| ಪಟ್ಟೇಲರು ಹೇಳಿದಾರೆ

ಂ ಂ

ಬೆಂಗಳೂರು ಜ 12— ಮುಸ್ಲಿಂ ವಿದ್ಯಾರ್ಥಿಗಳಿಗೆ ಇರುವ ರಿಯಾಯಿತಿಯನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಮೈಸೂರು ಮತ್ತು ಅಶೋಕಾ ಕಛೇರಿ ಮುಂಪ್ರದರ್ಶನ ನಡೆಸಿದರು.

ಂ ಂ

ಬೆಂಗಳೂರು ಜ 12 — ಜೂಡಿಷಿಯಲ್ ತೀರ್ಪುಗಳಲ್ಲಿ ನ್ಯಾ. ವಿ. ಸಭಾಧಿಪೇಶನ ನಡೆಯುವ ಸಂಭವನೀಯತೆಯಿಂದು ಹೇಳಿಕಾಸಿನ ಮಂತ್ರಿ ಶ್ರೀ ದಾಸಪ್ಪನವರು ನ್ಯಾಯಸಭೆಯಲ್ಲಿ ತಿಳಿಸಿದರು.

ಂ ಂ

ಕರಾಚಿ ಜ 11 — ಕರಾಚಿಯ ಸಿಕ್ ಮತ್ತು ಹಿಂದುಗಳು ಹೊಡೆದಾಡುತ್ತಿದ್ದಾರೆ.

ಂ ಂ

ಮಾಸ್ಕೊ ಜ 11 — ಬ್ರಿಟಿಷರೇ ಕಾಶ್ಮೀರದ ದುರ್ಘಟನೆಗೆಲ್ಲಾ ಕಾರಣರೆಂದು ರಷ್ಯಾದ ಟ್ರೂಡ್ ಎಂಬ ಪತ್ರಿಕೆ ಅಪಾದನೆ ಮಾಡಿದೆ

ಂ ಂ

ಬೆಂಗಳೂರು ಜ 12— ಸರಕಾರಿಯುಲ್ಲದ ದೇವಾಲಯಗಳಿಗೂ ಹರಿಜನ ದೇವಾಲಯ ಪ್ರವೇಶ ಮಸೂದೆ ಅನ್ವಯಿಸುವಂತೆ ಸಲೆಕ್ಟ್ ಕಮಿಟಿ ಒಂದು ತಿದ್ದುಪಡಿ ಸೂಚಿಸಿದೆ.

ಂ ಂ

ಬೆಂಗಳೂರು ಜ 8 — ಗೋಹತ್ಯೆ ನಿರೋಧಿಸಿ ಉಪವಾಸ ಕೈಕೊಳ್ಳಲಿದ್ದ ಡಾ|| ನಾರಾಯಣಸ್ವಾಮಿಯವರನ್ನು ಮುಖ್ಯಮಂತ್ರಿ ಶ್ರೀ ರೆಡ್ಡಿಯವರು ತಾ|| 14 ರಲ್ಲಿ ವಿಷಯವನ್ನು ಚರ್ಚಿಸಲು ಆಹ್ವಾನಿಸಿರುವುದರಿಂದ ಉಪವಾಸ ಮುಂದೂ ಹಾಕಿರುವರೆಂದು ಹೇಳಿಲಾಗಿದೆ.

ಸೂಚನೆ— ಉತ್ಕ್ರಾಯಣ ಪುಣ್ಯಕಾಲದ ಪ್ರಯುಕ್ತ ನಾಳೆ ಪತ್ರಿಕೆ ಪ್ರಕಟಿಸಲ್ಪಡುವುದಿಲ್ಲ.

ವು ಡ್ ಲ್ಯಾಂಡ್ಸ್

ಕೀರ್ತಿದಾಯಕ 4 ನೆ ವಾರ

ತುಳಸಿ ಜಲಂಧರ

(ಅಮೋಘ ತಮಿಳು ಚಿತ್ರ)

ಪಿ. ಯು. ಚಿನ್ನಪ್ಪ, ಕನ್ನಾಂಬಾ,
ಡೊರೈರಾಜ್, ಜಯ ಇವರ
ಅ ಭಿ ನ ಯ
ನಟರಾಜ, ಶಕುಂತಲ ಇವರ
ಅದ್ವಿತೀಯ ನರ್ತನ
A Karnataka Film Release

ಸ ತ್ಯ ವಾ ದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪಂಸ್ಥಳಕ್ಕೆ
ಅಂಹವೆಚ್ಚ ಸೇರಿ ರೂ. 9.

ಸೋಮವಾರಪಂಚಿಕೆ ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-13-0

Save the Cow

ಗೋ ವಧೆ ನಿಲ್ಲಲಿ

At Opera

ಯಶಸ್ವಿ 2 ನೇ ವಾರ

ಶಾಂತಾ ಆಪ್ಟೆ — ಮೋತೀಲಾಲ್
ಪಾತ್ರವಹಿಸಿರುವ

ಸಾ ವ ನ್

[ಹಿಂದಿ]

Edited, Printed and Published by M S Krishna Rao at the Satyavadi Press Chamaraja Agrahar Myrsore

ಅಂದ, ಚಂದ, ಗುಣ, ಇವೆಲ್ಲಕ್ಕೂ

ಮೈ ಸೂ ರು

ಮ ರ ದ ಸಾ ಮಾ ನು ಗ ಳು

ಸಹಜವಾದ ಅಚ್ಚುಕಟ್ಟು, ನಾಜೂಕಾದ ಮೈಕಟ್ಟು
ಸೌಂದರ್ಯ, ನಿಸ್ಸಂಶಯವಾದ ಗುಣ. ಇವೆಲ್ಲವನ್ನೂ ಹೊಂದಿರುವುವು.

ಉಪಯೋಗಿಸುವವರ ಅನುಕೂಲಾದಿಗಳನ್ನು ವಿಮರ್ಶಿಸಲಿ
ಅವರವರ ಇಷ್ಟಾನುಗುಣವಾಗಿ, ಕುಶಲಗಾರರಾದ ಕೆಲಸಗಾರರಿಂದ
ಸಾಮಾನುಗಳನ್ನು ತಯಾರಿಸಿ ಕೊಡುತ್ತೇವೆ.

ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್
ಮೈ ಸೂ ರು

SHAKTI SUDHA

A Superb TONIC

ಹಡಗು ಮಾರ್ಕಿನ ಹಿಂಗಿನ ಪುಡಿ

ಹೆಚ್ಚಿನ ಗುಣವುಳ್ಳದ್ದು



ಈ ಹಿಂಗಿನ ಪುಡಿ ನೀರನ್ನು ಸೇರಿಸದೆ ತಯಾರಿಸಿದ ಶಾಸ್ತ್ರೀಯ ಪರಿಶುದ್ಧವಾದದ್ದು. ಎಲ್ಲಾ ಸನಾತನಧರ್ಮ ಸಂಸಾರಗಳಲ್ಲೂ ಉಪಯೋಗಿಸಲರ್ಹವಾದುದು. ಆಹಾರ ಪನಾರ್ಥಗಳಿಗೆ ಒಂದು ಚಿಟಿಗೆ ಪುಡಿಯನ್ನು ಸೇರಿಸಿದ್ದೇ ಆದರೆ. ಅತಿ ಸುಮನೋಹರ ವಾಸನೆಯನ್ನು ಮತ್ತು ರುಚಿಯನ್ನು ಕೊಡುತ್ತದೆ. ದೇಹದ ಎಲ್ಲಾ ವ್ಯಾಧಿಗಳಿಗೂ ಉಪಯುಕ್ತವಾದ ಸಂಸಾರದ ಔಷಧಿ. ಒಂದು ಸಲ ಉಪಯೋಗಿಸಿದಲ್ಲಿ ಮತ್ತೆ ಬೇರಾವುದನ್ನೂ ಉಪಯೋಗಿಸದಂತೆ ಮಾಡುವುದಲ್ಲದೇ, ಇದನ್ನೇ ಸದಾ ಉಪಯೋಗಿಸುವಂತೆ ಪ್ರೇರೇಪಿಸುವುದು ಒಂದು ಪೌಂಡು ಈ ಹಿಂಗು ನಾಲ್ಕು ಪೌಂಡ ಬಿಳೀ ಹಿಂಗಿಗೆ ಸಮಾನವಾದುದು.

ಎಲ್ಲಾ ಪ್ರಮುಖ ವ್ಯಾಪಾರಸ್ಥರಲ್ಲಿಯೂ ಒಂದು ಪೌಂಡು, ಹಂ ಡ. ಸೇರು, ಅರ್ಧ ಸೇರು, ಒಂದು ಪಲಂ (ಪ್ಯಾಕೆಟ್ಟುಗಳಲ್ಲಿ) ದೊರೆಯುತ್ತದೆ ಒಂದು ಪೌಂಡಿನ ಬೆಲೆ ರೂ. 3-8-0

ನಮ್ಮ ಎ ಮತ್ತು ಟಿ. ಜಿ. ಮಾರ್ಕಿನ ಬಿಳೀ ಹಿಂಗು ಮತ್ತು ನಮ್ಮ ಶ್ರೀ ಓಂ ಮಾರ್ಕಿನ ಶುದ್ಧ ಕೇಸರಿ, ಸರ್ವ ಮಾರ್ಕಿನ ಕೇಸರಿ ಮತ್ತು ಸುವಾಸನೆ ಅಡಿಕೆ ಪುಡಿ ನಮ್ಮ ವೈಶಿಷ್ಟ್ಯ.

ವಲ್ಲಭದಾಸ್ ತೇಜ್ಪಾಲ್

(ಹಿಂಗು. ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು